ಆಶ್ರಮ ದಾಟಿದ್ದೇ, 'ಇಲ್ಲಿಯೇ ಮುಂದೆ ಎಡಗಡೆಯ ಕ್ರಾಸಿನಲ್ಲಿ ಮೂರನೆ ಮನೆ 'ಡೇ ಕೇರ್ ಸೆಂಟರ್'. ಅದರೆದುರು ಒಂದು ನಿಮಿಷ ನಿಲ್ಲಿಸ್ತೀರಾ? ಮಗುವನ್ನೆತ್ತಿಕೊಂಡು ಬರುತ್ತೇನೆ' ಎಂದಳು. ಅವನು ಮಾತಿಲ್ಲದೆ ಆಟೊ ಎಡಗಡೆಗೆ ತಿರುಗಿಸಿದ. ಹೇಳಿದ ಮನೆಯೆದುರು ನಿಲ್ಲಿಸಿದ. ಅವಳು ಕೆಳಗಿಳಿಯುತ್ತಾ 'ಈಗ ಬರ್ತೀನಿ. ಒಂದೇ ನಿಮಿಷ. ಕಾಯ್ತೀರಲ್ಲ?' ಎಂದು ಹೇಳಿದಳು. ತಪ್ಪು ಮಾಡುತ್ತಿರುವವಳಂತೆ ಮತ್ತೆ, 'ಹೆಚ್ಚು ಸಮಯ ತೆಗೆಯುವುದಿಲ್ಲ' ಎಂದಳು. ಮೊಟ್ಟ ಮೊದಲ ಬಾರಿಗೆ ಆ ಆಟೊ ಡ್ರೈವರ್ ಬಾಯಿ ತೆರೆದ – 'ಸಾವಕಾಶ ಬನ್ನಿ ತಾಯಿ!'

'ಡೇ ಕೇರ್'ನ ಮನೆಯ ಬಾಗಿಲು ಅಗಲವಾಗಿ ತೆರೆದಿತ್ತು. ಅದು ಎಂದೂ ಹಾಗೆ ತೆರೆದಿರುವುದೇ ಇಲ್ಲ. ಮಕ್ಕಳು ಹೊರಗೋಡುತ್ತಾವೆಂದು ಮೇಮ್ ಯಾವಾಗಲೂ ಅದನ್ನು ಮುಚ್ಚಿಬಿಡುತ್ತಿದ್ದಳು. ಗೇಟು ತೆರೆದು ಒಳಗೆ ಹೋದ ಅವಳಿಗೆ ಎದುರಾದದ್ದು ಕಂಕುಳಲ್ಲಿ ಕೊಡೆ ತುರುಕಿ ವ್ಯಾನಿಟಿ ಬ್ಯಾಗ್ ಏರಿಸಿ ಮಗುವಿನ ಜೊತೆ ಕಾಯುತ್ತಾ ನಿಂತ ಮೇಮ್. ಅಪರಾಧೀ ಮನೋಭಾವದಿಂದ ಅವಳು ಹಿಡಿಯಷ್ಟು ಸಂಕೋಚಗೊಂಡಳು.

'ರಿಂಗ್ ರೋಡ್ ಹತ್ತಿರ ವಿಪರೀತ ಟ್ರಾಫಿಕ್ ಜಾಮ್. ಗೋಡೆ ಕುಸಿದು ಯಾರೋ ಮಣ್ಣಲ್ಲಿ ಸಿಕ್ಕಿಹಾಕಿಕೊಂಡಿದ್ದಾರಂತೆ. ಮಳೆ ಬೇರೆ. ಒಂದೇ ಒಂದು ಆಟೊ ಸಿಗಲಿಲ್ಲ. ಎರಡು ತಾಸು ರಸ್ತೆಯಲ್ಲೇ ಇದ್ದೆ.'

ಮೇಮ್ ಮಾತನಾಡಲಿಲ್ಲ. ಅವಳೇ, 'ಸಾರಿ ಮೇಮ್' ಎಂದಳು. ಮುಂದೇನು ಹೇಳಬೇಕೆಂದು ಅವಳಿಗೆ ತಿಳಿಯಲಿಲ್ಲ. ಮುಂದೆ ಬಂದ ಮಗಳ ಬೆನ್ನಿಗೆ ಪುಸ್ತಕಗಳ ಬ್ಯಾಗ್ ಏರಿಸಿ ಟಿಫಿನ್ ಕ್ಯಾರಿಯರ್ ಚೀಲವನ್ನು ಎತ್ತಿಕೊಂಡಳು. ಕಾದು ಕೂತ ಮಗುವಿನ ಕಣ್ಣು ನಿದ್ರೆಯಿಂದ ಭಾರವಾಗಿತ್ತು. ಅದನ್ನು ಕಂಡು ಅವಳಿಗೆ ಕರುಣೆ ಮೂಡಿತು. ಮೇಮ್‌ಳ ಮೇಲೆ ಸಹ.

ಅವರ ಹಿಂದೆಯೇ ಬಾಗಿಲಿಗೆ ಬೀಗ ಹಾಕಿ ಹೊರಗೆ ಬಂದ ಮೇಮ್ ಗೇಟಿನ ಹೊರಗೆ ನಿಲ್ಲಿಸಿದ್ದ ಸ್ಕೂಟರ್ ಹತ್ತಲು ಹೋದಾಗ 'ನಾಳೆಯಿಂದ ಹೀಗಾಗಲ್ಲ ಮೇಮ್' ಎಂದು ತಪ್ಪೊಪ್ಪಿಗೆಯ ಧ್ವನಿಯಲ್ಲಿ ಹೇಳಿದ್ದು ಅವಳಿಗೇ ಕೇಳಿಸಲಿಲ್ಲ. ಕಾದು ನಿಂತ ಆಟೊ ಹತ್ತುವಾಗ, 'ಮೇಮ್‌ಗೆ ಗುಡ್ ನೈಟ್ ಹೇಳು ಮರೀ' ಎಂದಳು. ಮಗು ಪ್ರತಿಭಟಿಸಿ ಹೇಳದೆ ಹೋಯಿತು. ಸ್ಕೂಟರ್ ಮುಂದೆ ಹೋಯಿತು. ಸದ್ಯ ಏನೂ ಮಾತಾಡಲಿಲ್ಲವಲ್ಲ ಎಂದನ್ನಿಸಿ ಉಸಿರುಬಿಟ್ಟರೂ ಆಕೆಯ ಮೌನವೇ ಅವಳನ್ನು ಹೆಚ್ಚು ನೋಯಿಸಿತು.

ಅವಳು ಮನೆ ಮುಟ್ಟಿದಾಗ ಎಂಟೂಮುಕ್ಕಾಲು. ಆಟೊದ ಮೀಟರ್ ಎಂಬತ್ತೆಂಟು ರೂಪಾಯಿ ತೋರಿಸುತ್ತಿತ್ತು. ಅವಳು ಪರ್ಸಿನಿಂದ ನೂರರ ಒಂದು ನೋಟನ್ನು ತೆಗೆದು ಡ್ರೈವರ್‌ನಿಗೆ ಕೊಟ್ಟು 'ಥ್ಯಾಂಕ್ಸ್' ಎಂದಳು. ಅವನು ಚಿಲ್ಲರೆ ಕೊಡಲು ಜೇಬಿಗೆ ಕೈ ಹಾಕಿದಾಗ, 'ಬೇಡ ಇಟ್ಕೊಳ್ಳಿ. ನಿಮ್ಮಿಂದ ತುಂಬ ಉಪಕಾರವಾಯಿತು' ಎಂದು ನಿಡಿದಾದ ಉಸಿರು ಬಿಟ್ಟು, ಮನೆಯ ಬೀಗ ತೆಗೆಯಲು ಮಗುವಿನ ಕೈ ಹಿಡಿದು ತಿರುಗಿದಳು. ಆಟೊ ಸ್ಟಾರ್ಟಾದ ಸದ್ದು ಹಿಂದಿನಿಂದ ಕೇಳಿಸಿತು.

★★★

ಸಾಧಾರಣವಾಗಿ ಬೆಂಗಳೂರಿನಲ್ಲಿ ಅಚಾನಕ್ಕಾಗಿ ಒಮ್ಮೆ ಸಿಕ್ಕಿದ ಆಟೊ ಇನ್ನೊಮ್ಮೆ ಸಿಗುವುದಿಲ್ಲ. ಆದರೆ ಎಂಟು ಹತ್ತು ದಿನಗಳ ಬಳಿಕ ಅವಳು ಕಚೇರಿಗೆ ಹೋಗಲೆಂದು ಮನೆಯಿಂದ ಹೊರಬಿದ್ದು ಬುಲ್ ಟೆಂಪಲ್ ರಸ್ತೆಗೆ ಕಾಲಿಡುವಾಗ ಅದೇ ಆಟೊ ಕ್ರಾಸಿನಲ್ಲಿ ನಿಂತಿತ್ತು. ಅವಳನ್ನು ಕಂಡದ್ದೇ ಡ್ರೈವರ್, 'ನಮಸ್ಕಾರ ತಾಯಿ' ಎಂದು ಕೈ ಮುಗಿದ. ಅವಳಿಗೆ